## ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾಸನ

ಸ್ಪೆಷಲ್ ಕೇಸ್ ನಂಃ **78/2018**

ಚಾಸಾಃ**1** ಅಸಾಃ **1**

| | |
|---|---|
| ಹೆಸರು: | ತಿಮ್ಮಯ್ಯ |
| ತಂದೆಯ / ಗಂಡನ ಹೆಸರು: | ಚಂಚಯ್ಯ |
| ವಯಸ್ಸು: | 55 ವರ್ಷ |
| ಕೆಲಸಃ | ವ್ಯವಸಾಯ |
| ವಾಸಸ್ಥಳ: | ಮೆರ್ವೆ ಗ್ರಾಮ, ಆಲೂರು ತಾಲ್ಲೂಕು |

ದಿನಾಂಕಃ **21/07/2023** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಸ್‌ಪಿಪಿ ರವರಿಂದ ಃ

ಆರೋಪಿ ನನಗೆ ಗೊತ್ತು. ಅವರು ಭಕ್ತರವಳ್ಳಿ ಗ್ರಾಮದವರು. ಆರೋಪಿ ಒಕ್ಕಲಿಗ ಜಾತಿಗೆ ಸೇರಿದವರಿರುತ್ತಾರೆ. ನಾನು ಆದಿ ಕರ್ನಾಟಕ ಪರಿಶಿಷ್ಟ ಜಾತಿಯ ಸದಸ್ಯನಿರುತ್ತೇನೆ. ಚಾಸಾ–2 ನನ್ನ ಮಗಳು. ಉಳಿದ ಸಾಕ್ಷಿದಾರರು ಗೊತ್ತು. ಚಾಸಾ–3 ತೀರಿ 2 ವರ್ಷವಾಗಿರುತ್ತದೆ. ನನಗೆ 3 ಜನ ಮಕ್ಕಳಿರುರುತ್ತಾರೆ, ಅದರಲಿಲ 1 ಗಂಡು 2 ಹೆಣ್ಣು ಮಕ್ಕಳು. ಚಾಸಾ–2 ಎಂಎ ಬಿಎಡ್ ಮಾಡಿರುತ್ತಾರೆ, ಖಾಸಗಿಯಾಗಿ ಉಪನ್ಯಾಸಕ ವೃತ್ತಿ ಮಾಡುತ್ತಿರುತ್ತಾರೆ. 2017 ರಲ್ಲಿ ಚಾಸಾ–2 ದ್ವಿತೀಯ ಪಿಯುಸಿ ಓದುತ್ತಿದ್ದಳು. ಅವಳು ದಿನಾಲು ಕಾಲೇಜಿಗೆ ಬಸ್ಸು ಮುಖಾಂತರ ಹೋಗಿ ಬರುತ್ತಿದ್ದರು. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನಾನು ಸಹಿ ಮಾಡುವುದನು ಕಲಿತಿರುತ್ತೇನೆ.

2. ಸುಮಾರು 6 ವರ್ಷಗಳ ಹಿಂದೆ ಬೆಳಿಗ್ಗೆ 7.30 ಕ್ಕೆ ಚಾಸಾ–2 ಕಾಲೇಜಿಗೆ ಹೋಗಿದ್ದಳು. ನನ್ನ ಮಗಳ ಬಸ್ಸು ಮುಖಾಂತರ ಹೊನ್ನೇನಹಳ್ಳಿ ಕ್ರಾಸ್‌ನಲ್ಲಿ ಇಳಿದು ನಮ್ಮ ಊರಿಗೆ ನಡೆದುಕೊಂಡು

ಬರಬೇಕು. ಚಾಸಾ–2 ಎಡನಹಳ್ಳಿ ರಸ್ತೆಯ ಮುಖಾಂತರ ಬರುವಾಗ ಅಶೋಕ್ ಜಮೀನು ಹತ್ತಿರ ಆರೋಪಿ ನಮ್ಮ ಮಗಳ ಕೈ ಹಿಡಿದು ಎಳೆದು ಬಲವಂತ ಮಾಡಿ ಮಾನಭಂಗ ಮಾಡಲು ಪ್ರಯತ್ನ ಮಾಡಿದ. ನಾನು ಆಗ ಊರಲ್ಲಿದ್ದೆ. ಚಾಸಾ–3 ಘಟನೆಯ ವಿಷಯವನ್ನು ಫೋನ್ ಮಾಡಿ ತಿಳಿಸಿದರು. ನಾನು ರಾಮೇಗೌಡರ ಮನೆಯ ಹತ್ತಿರ ಸಂಜೆ 5.45 ಕ್ಕೆ ಹೋದಾಗ, ಚಾಸಾ–2 ಇದ್ದರು. ನನ್ನ ಮಗಳು ಘಟನೆಯ ವಿಷಯವನ್ನು ಹೇಳಿರುತ್ತಾಳೆ.

3. ನನ್ನ ಮಗಳು ಪುನಃ ಹೇಳಿದೆನೆಂದರೆಃ ಆರೋಪಿ ನನ್ನ ಮಗಳ ಬಲಭುಜದ ಬಟ್ಟೆಯನ್ನು ಹಿಡಿದು ಎಳೆದಾಡಿ ಶಾಲೆ ಬ್ಯಾಗ್ ಕೆಳಗಡೆ ಬಿದಿದೆ ಎಂದು ಹೇಳಿದಳು. ಚಾಸಾ–3 ಆಗ ಬಂದಿರುತ್ತಾರೆ. ಆರೋಪಿ ಚಾಸಾ–3 ಯಾರು ಅಂತಾ ಕೇಳಿದ ಕೂಡಲೆ ಚಾಸಾ–2 ರವರನ್ನು ಬಿಟ್ಟು ಓಡಿ ಹೋಗಿರುತ್ತಾರೆ. ಮರು ದಿವಸ ದೂರು ಕೊಟ್ಟಿರುತ್ತೇನೆ. ದೂರು ನೋಡುತ್ತಿದ್ದು, ದೂರನ್ನು ನಿಪಿ–1 ಎಂದು ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ಆರೋಪಿಗೆ ನನ್ನದು ಮತ್ತು ಚಾಸಾ–2 ರವರದು ಯಾವುದು ಜಾತಿ ಎಂದು ಗೊತ್ತಿದೆ. ಸಾಕ್ಷಿ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಹೆಚ್ ಆರ್ ಕೆ ವಕೀಲರಿಂದಃ</u>

ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ವೇಳೆ ಕೇಳಿದ್ದು, ಖರ್ಚಿನೊಂದಿಗೆ ವೇಳೆ ಕೊಡಲಾಯಿತು.

(ನನ್ನ ಉಕ್ತಲೇಖನಕಲ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಅಪರ ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಹಾಸನ.